ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: DTE-ADMI0EST(10)/56/2024

ಆಯುಕ್ತರವರ ಕಛೇರಿ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಅರಮನೆ ರಸ್ತೆ, ಬೆಂಗಳೂರು.
ದಿನಾಂಕ:11-11-2024

## ಸುತ್ತೋಲೆ

ವಿಷಯ: ತಾಂತ್ರಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿನ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧ್ಯಾಪಕರುಗಳಿಗೆ 7ನೇ ಎಐಸಿಟಿಇ ವೇತನ ಶ್ರೇಣಿಯಲ್ಲಿ ಪದೋನ್ನತಿ ನೀಡುವ ಬಗ್ಗೆ.

ಉಲ್ಲೇಖ:

1. ಸರ್ಕಾರದ ಪತ್ರ ಸಂಖ್ಯೆ ಇಡಿ /86 / ಡಿಟಿಇ / 2023 ದಿನಾಂಕ 07-10-2023.
2. ಈ ಕಛೇರಿ ಸುತ್ತೋಲೆ ಸಂಖ್ಯೆ: DTE-ADMI0EST(10)/55/2024 ದಿನಾಂಕ:07-10-2024.
3. ಈ ಕಛೇರಿ ಸಭಾ ಸೂಚನಾ ಪತ್ರ ಸಂಖ್ಯೆ ಡಿಟಿಇ/ ಎಡಿಎಂಐಂ / ಇಎಸ್ ಟಿ (17) 13 2024 ದಿನಾಂಕ 20-06-2024 ಮತ್ತು 25-06-2024.
4. ಕುಲಸಚಿವರು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಬೆಳಗಾವಿ ಇವರ ಪತ್ರ ಸಂಖ್ಯೆ: ವಿತಾವಿ ಪಿಎಸ್ 2023-24 479 ದಿನಾಂಕ: 01-12-2023.
5. ಈ ಕಛೇರಿ ಸಭಾ ಸೂಚನಾ ಪತ್ರ ಸಂಖ್ಯೆ: DTE-ADMI0EST(10)/56/2024 ದಿನಾಂಕ: 11-11-2024

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (2) ಪತ್ರದಲ್ಲಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಪೂರ್ಣಕಾಲಿಕ ನೆಲೆಯಲ್ಲಿ ಸೇವೆಗೆ ಸೇರಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಅಧ್ಯಾಪಕರುಗಳಿಗೆ 7ನೇ ಎಐಸಿಟಿಇ ವೇತನ ಶ್ರೇಣಿ ಅಧಿನಿಯಮ 2019 ಮತ್ತು 2020 ಸ್ಪಷ್ಟೀಕರಣ/ಸುತ್ತೋಲೆ ಹಾಗೂ ಎಐಸಿಟಿಇ ರವರು ಕಾಲಕಾಲಕ್ಕೆ ಹೊರಡಿಸಿರುವ ಆದೇಶಗಳ ಅನ್ವಯ ಪದೋನ್ನತಿ ಪಡೆಯಲು ಅರ್ಹರಿರುವ ಎಲ್ಲಾ ಅಧ್ಯಾಪಕ ವೃಂದದವರಿಂದ ಪ್ರಾಂಶುಪಾಲರುಗಳ ಪ್ರಸ್ತಾವನೆಗಳನ್ನು ಪಡೆದು ನಿಯಮಾನುಸಾರ ಪ್ರಾಥಮಿಕ ಹಂತದ ಪರಿಶೀಲನೆ ಮಾಡಿ ಕ್ರಮವಾಗಿ ದಿನಾಂಕ 16-10-2024 ರೊಳಗೆ ಸಿದ್ಧಪಡಿಸಿ ಸಂಬಂಧಪಟ್ಟ ಸಂಸ್ಥೆಯ ಆಯಾ ವಿಭಾಗದ ವಿಭಾಗಾಧಿಕಾರಿಗಳೊಂದಿಗೆ ಆಯುಕ್ತಾಲಯದಿಂದ ಸೂಚಿಸುವ ದಿನಾಂಕದಂದು ಹಾಜರಾಗಿ ಪದೋನ್ನತಿ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೂ ಕಾರ್ಯನಿರ್ವಹಿಸುವಂತೆ ಸೂಚಿಸಲಾಗಿತ್ತು.

ಈ ಹಿನ್ನಲೆಯಲ್ಲಿ ವಿಟಿಯುರವರಿಂದ ಅನುಮೋದಿತ ಆಯ್ಕೆ ಸಮಿತಿಸಭೆಯನ್ನು ಈ ಕೆಳಕಂಡ ದಿನಾಂಕಗಳಂದು ಆಯೋಜಿಸಲಾಗಿದೆ. 7ನೇ ಎಐಸಿಟಿಇ ವೇತನ ಶ್ರೇಣಿ ಅಧಿನಿಯಮ 2019 ಮತ್ತು 2020 ಸ್ಪಷ್ಟೀಕರಣ/ಸುತ್ತೋಲೆ ಹಾಗೂ ಎಐಸಿಟಿಇ ರವರು ಕಾಲಕಾಲಕ್ಕೆ ಹೊರಡಿಸಿರುವ ಆದೇಶಗಳ ಅನ್ವಯ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಅರ್ಹ ಬೋದಕವೃಂದದವರಿಗೆ ಪದೋನ್ನತಿ ಸೌಲಭ್ಯ ವಿಸ್ತರಿಸುವ ಸಂಬಂಧ ಪರಿಶೀಲಿಸಲು ಸ್ಕಾನೀಕರಣ ಸಮಿತಿ (screening cum evaluation/selection committee) ಯನ್ನು ರಚಿಸಿ ಸಭೆಯನ್ನು ಕೆಳಕಂಡ ದಿನಾಂಕಗಳಂದು ನಿಗದಿಪಡಿಸಲಾಗಿದ್ದು, ಸಂಬಂಧಪಟ್ಟ ಪ್ರಾಂಶುಪಾಲರು ಹಾಗೂ ವಿಭಾಗಾಧಿಕಾರಿಗಳು ಬೋದಕ ವರ್ಗದವರು ಸಲ್ಲಿಸಿರುವ ಎಲ್ಲಾ ದಾಖಲೆಗಳನ್ನು ಕೂಲಕಂಷವಾಗಿ ಪರಿಶೀಲಿಸಿ ಎಲ್ಲಾ ದಾಖಲೆಗಳಿಗೆ ಮೊಹರಿನೊಂದಿಗೆ ಸಹಿ ಮಾಡಿ ಕಡ್ಡಾಯವಾಗಿ ದೃಡೀಕರಿಸಿ ಶಿಫಾರಸ್ಸಿನೊಂದಿಗೆ ಈ ಸುತ್ತೋಲೆಯೊಂದಿಗೆ ಪ್ರಮಾಣಪತ್ರ (Affidevite) ವನ್ನು ಬೋದಕವರ್ಗದವರಿಂದ ಪಡೆದು ಪ್ರಾಂಶುಪಾಲರು ದೃಡೀಕರಿಸಿ ಕೆಳಕಂಡ ದಿನಾಂಕ ಪ್ರಕ್ರಿಯೆ ಪೂರ್ಣಗೊಳಿಸುವವರೆಗೆ ಆಯಾ ವಿಭಾಗಾಧಿಕಾರಿಗಳು ಎಲ್ಲಾ ದಾಖಲೆ/ಮಾಹಿತಿಗಳೊಂದಿಗೆ ಸರ್ಕಾರಿ ತಾಂತ್ರಿಕ ಮುದ್ರಣ ಸಂಸ್ಥೆ ಬೆಂಗಳೂರು ಈ ಸಂಸ್ಥೆಯ ಸಭಾಂಗಣದಲ್ಲಿ ಬೆಳಗ್ಗೆ 10.00ಕ್ಕೆ ಅನ್ಯ ಕಾರಣಗಳನ್ನು ನೀಡದೆ ಸ್ಕಾನೀಕರಣ ಸಮಿತಿ (screening cum evaluation/selection committee) ಮುಂದೆ ಖುದ್ದಾಗಿ ಸಿಇಟಿ ಕಾಲೇಜು ಕೋಡ್‌ನ ಪ್ರಕಾರ ಪ್ರಸ್ತಾವನೆ ಪರಿಶಿಲನೆಗಾಗಿ ಹಾಜರಾಗಬೇಕೆಂದು ಸೂಚಿಸಲಾಗಿದೆ.

ಮುಂದುವರೆದು, ಪ್ರಸ್ತಾವನೆ ಸಲ್ಲಿಸಿರುವ ಯಾವುದೇ ಇಲಾಖಾವಿಚಾರಣೆ/ನ್ಯಾಯಾಲಯ ಪ್ರಕರಣ /ಇಲಾಖಾ ಲೆಕ್ಕತಪಾಸಣಾ ಕಂಡಿಕೆ/ಮಹಾಲೇಖಾಪಾಲರ ಅಕ್ಷೇಪಣೆ ಕಂಡಿಕೆ ಬಾಕಿ ಇರುವ/ಇಲ್ಲದಿಒರುವ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಿ ದೃಡೀಕರಿಸಿ ಸಲ್ಲಿಸುವುದು. ಬೋಧಕ ವೃಂದದವರು ಸಲ್ಲಿಸಿದ ದಾಖಲೆಗಳ ನೈಜತೆ ಸಂಬಂಧ ಮುಂದಿನ ಅಗುಹೋಗುಗಳಿಗೆ ಸಂಬಂಧಪಟ್ಟ ಸಿಬ್ಬಂದಿಗಳು /ಪ್ರಾಂಶುಪಾಲರರುಗಳೇ ನೇರ ಹೊಣೆಗಾರರಾಗಿರುತ್ತಾರೆ ಎಂದು ಈ ಮೂಲಕ ತಿಸಿಸಲಾಗಿದೆ.

**ಸ್ಥಾನೀಕರಣ ಸಮಿತಿ (screening cum evaluation/selection committee) ಯ ವೇಳಾಪಟ್ಟಿ**

| ಕ್ರ. ಸಂ. | ದಿನಾಂಕ | ಸಂಸ್ಥೆ | ವಿಭಾಗ |
|---|---|---|---|
| 1. | 13-11-2024 ರಿಂದ ಮುಕ್ತಾಯದವರೆಗೆ | ಎಲ್ಲಾ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳು | ಇಂಗ್ಲೀಷ್, , ಲೈಬ್ರರಿಸೈನ್ಸ್, ಗಣಿತ ಮತ್ತು ದೈಹಿಕಶಿಕ್ಷಣ |
| 2. | 14-11-2024 ರಿಂದ ಮುಕ್ತಾಯದವರೆಗೆ | ಎಲ್ಲಾ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳು | ಭೂವಿಜ್ಞಾನ, ಸಿವಿಲ್, ಗಣಕಯಂತ್ರ, ಇ&ಸಿ, ಮೆಕ್ಯಾನಿಕಲ್, ರಸಾಯನಶಾಸ್ತ್ರ, ಮತ್ತು ಭೌತಶಾಸ್ತ್ರ, |

**ನಿರ್ದೇಶಕರು**
**ತಾಂತ್ರಿಕ ಶಿಕ್ಷಣ ಇಲಾಖೆ**

ಇವರಿಗೆ:

1. ಎಲ್ಲಾ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳ ಪ್ರಾಂಶುಪಾಲರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
2. ಪ್ರಾಂಶುಪಾಲರು, ಸರ್ಕಾರಿ ಮುದ್ರಣ ಸಂಸ್ಥೆ, ಬೆಂಗಳೂರು ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.

ಪ್ರತಿ:

1. ಆಯುಕ್ತರವರ ಆಪ್ತ ಶಾಖೆ-ಮಾಹಿತಿಗಾಗಿ
2. ನಿರ್ದೇಶಕರವರ ಆಪ್ತ ಶಾಖೆ-ಮಾಹಿತಿಗಾಗಿ
3. ಜಂಟಿ ನಿರ್ದೇಶಕರವರ ಆಪ್ತ ಶಾಖೆ-ಮಾಹಿತಿಗಾಗಿ
4. ಸಂಯೋಜಕರು ಈ ಆಡಳಿತ ವಿಭಾಗ ಇಲಾಖಾ ಜಾಲತಾಣದಲ್ಲಿ ಪ್ರಕಟಿಸಲು
5. ಕಚೇರಿ ಪ್ರತಿ